ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಬಾವಿಗಳೇ ಇಲ್ಲ, ಪಂಪುಸೆಟ್ಟನ್ನು ಎಲ್ಲಿಂದ ತರುತ್ತಾರೆ? ಈ ಪ್ರಶ್ನೆ ಎಲ್ಲಿ ಬರುತ್ತದೆ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ :— ನಿನ್ನೆದಿವಸ ರಿಪೋರ್ಟ್ ಬಂದ ತಕ್ಷಣ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ನನ್ನ ಕಾಳಜಿಯನ್ನು ತಾವು ಕನಿಷ್ಟಪಕ್ಷ ನೋಡಬೇಕು.

ಶ್ರೀ ವಾಟಾಳ್ ನಾಗರಾಜ್ :— ನಾವು ನಿಮ್ಮ ಕಾಳಜಿ ಬಗ್ಗೆ ಪ್ರಶ್ನೆ ಮಾಡಿಲ್ಲ. ಕೊಳವೆ ಇಲ್ಲ, ಬಾವಿಯೂ ಇಲ್ಲ. ಎಲ್ಲವೂ ರಾಜಕೀಯದಲ್ಲಿ ಹೊಲಸೆದ್ದು ಹೋಗಿದೆ.

ಅಧ್ಯಕ್ಷರು :— ಆಯಿತು. ಮುಂದಿನ ಪ್ರಶ್ನೆ ಶಿವನಂಜಪ್ಪನವರು...

ಶ್ರೀ ಬಿ. ಶಿವರಾಮು :— ಕೆ.ಇ.ಬಿ. ಯವರಿಗೆ ಹೇಳಿ ಮತ್ತೆ ಸರ್ವೀಸ್ ಮಾಡಿಸುವುದಕ್ಕೆ ಆಗುವುದಿಲ್ಲ ಎಂದರೆ ಇದಕ್ಕೆ ಒಂದು ಕಚೇರಿ ಎಂದು ಬೇಕೆ?

ಮಾವಿನಹಳ್ಳಿ ಗ್ರಾಮಕ್ಕೆ ವಿದ್ಯಾರ್ಥಿನಿಲಯ ಮಂಜೂರು.

31(17) ಶ್ರೀ ಜಿ.ಎಸ್.ಶಿವನಂಜಪ್ಪ (ಗುಬ್ಬಿ) :— ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಬ್ಬಿ ಕ್ಷೇತ್ರದ ಹಿಂದುಳಿದ ಪ್ರದೇಶವಾದ ಸಿ.ಎಸ್.ಪುರ ಹೋಬಳಿ, ಮಾವಿನಹಳ್ಳಿ ಗ್ರಾಮಕ್ಕೆ ವಿದ್ಯಾರ್ಥಿನಿಲಯ ಮಂಜೂರು ಮಾಡಬೇಕೆಂದು ಸಾರ್ವಜನಿಕರು ಮತ್ತು ಶಾಸಕರು ಕಳೆದ ಮೂರು ವರ್ಷದಿಂದ ಒತ್ತಾಯಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ ಅದನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು) :—

ಅ) ಹೌದು.

ಆ) ಅಗತ್ಯತೆಯನ್ನು ಆಧರಿಸಿ ಮುಂದಿನ ಹಣಕಾಸಿನ ವರ್ಷದಲ್ಲಿ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ ಮಾವಿನಹಳ್ಳಿಯಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಹಾಸ್ಟೆಲನ್ನು ಪ್ರಾರಂಭ ಮಾಡಬೇಕು ಎಂದು ಕೇಳಿದ್ದೇವೆ.

ಅಧ್ಯಕ್ಷರು :— ನಿಮಗೆ ಹಾಸ್ಟೆಲ್ ಬೇಕು. ಅವರು ದುಡ್ಡುಕಾಸು ನೋಡಿಕೊಂಡು ಮಾಡುತ್ತೇವೆ ಎಂದು ಹೇಳಿದ್ದಾರೆ. ಮಂತ್ರಿಗಳೇ, ಈ ಸಲವಾದರೂ ಅವರಿಗೆ ಮಾಡಿಸಿಕೊಡುತ್ತೀರಾ?

ಶ್ರೀ ಜಿ.ಎಸ್. ಶಿವನಂಜಪ್ಪ :— ಅವರು ಮೂರು ವರ್ಷಗಳಿಂದಲೂ ಇದೇ ಮಾಮೂಲಿ ಉತ್ತರವನ್ನು ಹೇಳುತ್ತಿದ್ದಾರೆ.

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್ :— ಅವರು ಕಳಿದ ಸಲ ಪತ್ರ ಬರೆದಿದ್ದರು...

ಅಧ್ಯಕ್ಷರು :— ಅವರು ಬಹಳ ಸೀನಿಯರ್ ಮೆಂಬರ್ ಇದ್ದಾರೆ. ಏನೋ ಕೇಳುತ್ತಿದ್ದಾರೆ, ಮಾಡಿಕೊಡಿ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ :— ಮುಂದಿನ ಬಜೆಟ್‌ನಲ್ಲಿ ಮಂಜೂರು ಮಾಡತಕ್ಕಂಥ ಪ್ರಯತ್ನ ಮಾಡುತ್ತೇನೆ.

<u>ಗುಳೇದ ಗುಡ್ಡದಲ್ಲಿ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ.</u>

32(368) ಶ್ರೀ ರಾಜಶೇಖರ್ ಶೀಲವಂತ ವೀರಣ್ಣ (ಗುಳೇದಗುಡ್ಡ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಗುಳೇದಗುಡ್ಡ ನಗರದಲ್ಲಿ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

(ಆ) ಹಾಗಿದ್ದರೆ ಅದು ಈಗ ಯಾವ ಹಂತದಲ್ಲಿದೆ? ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು) :—

(ಅ) ಪರಿಶೀಲನೆಯಲ್ಲಿರುತ್ತದೆ.

(ಆ) ಸೂಕ್ತ ನಿವೇಶನ ದೊರೆತ ನಂತರ ಕಟ್ಟಡ ನಿರ್ಮಾಣದ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ರಾಜಶೇಖರ್ ಶೀಲವಂತ ವೀರಣ್ಣ :— ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಸೂಕ್ತವಾದ ನಿವೇಶನ ದೊರೆತ ನಂತರ ಕಟ್ಟಡ ನಿರ್ಮಾಣ ಶುರುಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ 11-2-99ರಂದು ಮುನಿಸಿಪಾಲಿಟಿಯವರು ಠರಾವು ಮಾಡಿ ಎರಡು ಪ್ಲಾಟ್‌ಗಳನ್ನು ಈಗಾಗಲೇ ಅವರಿಗೆ ಒದಗಿಸಿದ್ದಾರೆ. ಹಿಂದೆ ಕೂಡ ನಾನು